ಕರ್ನಾಟಕ ವಿಧಾನಸಭೆಯ ಸದಸ್ಯರಾದ ಶ್ರೀ ರಾಜೇಂದ್ರನ್.ಎಸ್. (ಕೋಲಾರ ಚಿನ್ನದಗಣಿ) ರವರು ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ

ಕೆ.ಜಿ.ಎಫ್, ನಲ್ಲಿ ಸಂಚಾರಿ ಪೊಲೀಸ್ ವ್ಯವಸ್ಥೆ ಇಲ್ಲದೇ ಅಪಘಾತಗಳು ಜರುಗುತ್ತಿರುವುದರಿಂದ ಜರೂರಾಗಿ ಕೆ.ಜಿ.ಎಫ್. ನಗರದಲ್ಲಿ ಒಂದು ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಉತ್ತರ :

ಕೆ.ಜಿ.ಎಫ್. ನಲ್ಲಿ ಒಂದು ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರಿಂದ ಈ ಕೆಳಗಿನಂತೆ ಪ್ರಸ್ತಾವನೆ ಸ್ವೀಕೃತವಾಗಿದೆ.

ಕೆ.ಜಿ.ಎಫ್. ನಗರಕ್ಕೆ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಗಡಿ ರಾಜ್ಯಗಳಾಗಿರುತ್ತವೆ. ಈ ನಗರದ ವ್ಯಾಪ್ತಿ 11 ಚ.ಕಿ.ಮೀ. ವಿಸ್ತೀರ್ಣವಿದ್ದು, 3,67,830 ಜನಸಂಖ್ಯೆಯನ್ನು ಹೊಂದಿರುತ್ತದೆ. ಈಗ ಸುಮಾರು 16.265 ವಾಹನಗಳು (ಕೆ.ಎಸ್.ಆರ್.ಟಿ.ಸಿ. ವಾಹನಗಳು, ಖಾಸಗಿ ವಾಹನಗಳು, ಆಟೋರಿಕ್ಷಾಗಳು, ಮೋಟಾರ್ ಸೈಕಲ್‌ಗಳು, ಮ್ಯಾಕ್ಸಿಕ್ಯಾಬ್‌ಗಳು ಮತ್ತು ಇತರೆ ವಾಹನಗಳು) ನೊಂದಣಿಯಾಗಿರುತ್ತವೆ. ಇದಲ್ಲದೆ ಕೆ.ಜಿ.ಎಫ್ ನಗರದಿಂದ ಆಂಧ್ರಪ್ರದೇಶದ ಚಿತ್ತೂರು, ವಿ.ಕೋಟಾ, ಕುಪ್ಪಂ ಮತ್ತು ತಮಿಳುನಾಡಿನ ಕೃಷ್ಣಗಿರಿ ಗುರಿಯಾತಂ ವೆಲ್ಲೂರು ಹಾಗೂ ಮದ್ರಾಸ್ ನಗರಗಳಿಗೆ ಇಲ್ಲಿಂದಲೇ ನೇರ ಬಸ್ ಸಂಪರ್ಕವಿದ್ದು, ಅಲ್ಲಿಂದಲೂ ಸಹ ಸಾಕಷ್ಟು ವಾಹನಗಳು ಈ ನಗರಕ್ಕೆ ದಿನನಿತ್ಯ ಬಂದು ಹೋಗುತ್ತವೆ. ಹೀಗಿರುವುದರಿಂದ ಕೆ.ಜಿ.ಎಫ್ ನಗರದಲ್ಲಿ 8 ಟ್ರಾಫಿಕ್ ಪಾಯಿಂಟ್, 10 ಸಿಗ್ನಲ್ ಪಾಯಿಂಟ್‌ಗಳನ್ನು ನಿಗಧಿಪಡಿಸಿದ್ದು. ಈ ಪಾಯಿಂಟ್‌ಗಳಿಗೆ ಅನುಸಾರವಾಗಿ ಸಿಬ್ಬಂದಿಗಳ ನೇಮಕ ಮಾಡಲು ಅತ್ಯಾವಶ್ಯಕವಿರುತ್ತದೆ.

ಪ್ರಸ್ತುತ ಪ್ರಕರಣವನ್ನು ಆರ್ಥಿಕ ವರ್ಷ 2007–08ರಲ್ಲಿ ಪರಿಗಣಿಸಲು ಅವಶ್ಯ ಕ್ರಮಕ್ಕೈಗೊಳ್ಳಲಾಗುವುದು.

ಶ್ರೀ ಹೆಚ್. ನಿಂಗಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಕುಣಿಕಲ್ ಕ್ಷೇತ್ರದ ಹೆಬ್ಬುರು ಮತ್ತು ಗುಳೂರು ಹೋಬಳಿಗಳ ಮತ್ತು ತಿಪಟೂರು ತಾಲ್ಲೂಕಿನ ಹೊನವಳ್ಳಿಯ ಕುಡಿಯುವ ಏತನೀರಾವರಿ ಯೋಜನೆಗಳು ಮಂಜೂರಾಗಿ ಸುಮಾರು 6 ವರ್ಷಗಳಾಗಿವೆ, ಕಾರ್ಯಾರಂಭ ಮಾಡುವಂಥ ಪೂರ್ವದ ಎಲ್ಲಾ ಪ್ರಕ್ರಿಯೆಗಳು ಮುಗಿದು ಟೆಂಡರ್ ಸಹ ಕರೆಯಲಾಗಿದೆ. ಆದರೆ ಕಾವೇರಿ ಜಲವಿವಾದ ನ್ಯಾಯಮಂಡಳಿಯ ಮುಂದೆ ಪ್ರಕರಣವಿರುವುದರಿಂದ ಅಂತಿಮ ತೀರ್ಪು ಬರುವವರೆಗೆ ಟೆಂಡರ್ ಪ್ರಸ್ತಾವನೆಯನ್ನು ತಡೆಹಿಡಿದು ಸರ್ಕಾರ ಆದೇಶ ಹೊರಡಿಸಿದ್ದು, ಅದು ಕೂಡ 2 ವರ್ಷಗಳಾಗಿರುತ್ತದೆ. ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪು ಹೊರಬಂದಿರುವುದರಿಂದಲೂ ಮತ್ತೆ ಈ ಯೋಜನೆಗಳು ಸಂಪೂರ್ಣವಾಗಿ ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದಲೂ ರಾಷ್ಟ್ರೀಯ ಜಲನೀತಿಗನುಗುಣವಾಗಿ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಬೇಕೆಂದು ನಿಯಮಗಳಿರುವುದರಿಂದಲು ಈ ಯೋಜನೆಗಳ ಶೀಘ್ರ ಕಾರ್ಯಾರಂಭ ಮಾಡಲು ನಾನು ಜಲಸಂಪನ್ಮೂಲ ಸಚಿವರ ಗಮನಸೆಳೆಯುತ್ತಿದ್ದೇನೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಇದು ಹೇಮಾವತಿ ಹೊನವಳ್ಳಿ ಕೆರೆಗೆ ಏತ ನೀರಾವರಿಯ ಬಗ್ಗೆ ಮಾನ್ಯ ಸದಸ್ಯರಾದ ಲಿಂಗಪ್ಪನವರು ಹೇಳಿದಂತೆ ಸುಮಾರು 6 ವರ್ಷಗಳಿಂದಲು ನೆನೆಗುದಿಗೆಗೆ ಬಿದ್ದಿದೆ. ಅರಸೀಕೆರೆ ತಾಲ್ಲೂಕಿನ ಸುಮಾರು 120 ಗ್ರಾಮಗಳಲ್ಲಿ ಫ್ಲೋರೈಡ್ ಇದೆ. ಕಾರಣ, ಹೊನವಳ್ಳಿ ಕೆರೆಗೆ ನೀರನ್ನು ಹಾಯಿಸಿದರೆ, ಸುಮಾರು ಒಂದು ಹೋಬಳಿಯ ಕೆರೆಕಟ್ಟೆಗಳಿಗೆ ನೀರು ಬರುತ್ತದೆ. ಈ ಬಗ್ಗೆ ನಾನು ಭಾರಿ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಭಾರಿ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇಬ್ಬರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ, ಈ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕೆಂದು ಈಗಾಗಲೆ ಇಲಾಖೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಲಿಖಿತ ಉತ್ತರವನ್ನು ಕೊಟ್ಟ ನಂತರ ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೆ ಸಮಯಬೇಕಾಗಿರುವುದರಿಂದ ಹೇಳುತ್ತಿದ್ದೇನೆ. ಸಂಬಂದಪಟ್ಟ ಶಾಸಕರನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕೂರಿಸಿಕೊಂಡು ಈ

ಕುಡಿಯುವ ನೀರಿನ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂಬುದನ್ನು ಚರ್ಚೆ ಮಾಡಬೇಕು. ಏಕೆಂದರೆ, ಅನೇಕ ವರ್ಷಗಳಿಂದ ಇದು ಟ್ರಿಬ್ಯುನಲ್‌ನಲ್ಲಿ ಇದ್ದುದ್ದರಿಂದ ಅದು ಪೆಂಡಿಗ್ ಇತ್ತು. ಈಗ ತಕ್ಷಣ ಇದನ್ನು ಕಾರ್ಯಗತ ಮಾಡಬೇಕಾದರೆ, ಮುಖ್ಯಮಂತ್ರಿಗಳೊಡನೆ ಕುಳಿತು ಚರ್ಚೆ ಮಾಡಿ, ಖಂಡಿತ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ನಿಂಗಪ್ಪ : ಟ್ರಿಬ್ಯುನಲ್ ಮುಂದೆ ಇದ್ದಂಥ ಸಂದರ್ಭದಲ್ಲೆ 2001ರಲ್ಲಿ ಇದು ಮಂಜೂರಾಗಿದೆ. ಮತ್ತು ಪ್ರತಿವರ್ಷ ಎಲ್ಲಾ ಹಂತದ ಪ್ರಕ್ರಿಯೆಗಳು ಮುಗಿದು ಟೆಂಡರ್ ಅನ್ನು ಕೂಡ ಕರೆದಿರುವ ಒಂದು ಯೋಜನೆ ಇದಾಗಿದೆ. ಇದು ಸುಮಾರು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂಥ ಯೋಜನೆಯಾಗಿದೆ.

ಇವತ್ತು ಏನಾಗಿದೆ, 24–07–2005ರಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು .....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಿಯಮದ ಪ್ರಕಾರ ಅವರು ಬರವಣಿಗೆಯಲ್ಲಿ ಈ ಸಭೆಗೆ ಒಂದು ಉತ್ತರ ಕೊಡಬೇಕು. ಅವರು ಉತ್ತರ ಕೊಟ್ಟ ಮೇಲೆ ನೀವು clarification ಕೇಳಬೇಕು. ಅದು ರೆಕಾರ್ಡ್‌ಗೆ ಹೋಗಬೇಕು. ಇದು ಗಮನಸೆಳೆಯುವ ಸೂಚನೆ. ಸರ್ಕ್ಯುಲೇಷನ್ ರೆಕಾರ್ಡ್‌ಗೆ ಹೋಗಬೇಕು ಅದಕ್ಕೋಸ್ಕರ ಹೇಳುತ್ತಿದ್ದೇವೆ. ನಾಳೆ ದಿವಸ ಅಧಿಕಾರಿಗಳು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಇದೇ ತರಹ ಉದಾಸೀನ ಮಾಡಬಹುದು. ಆ ಕಾರಣಕ್ಕೋಸ್ಕರ ಈ ಯೋಜನೆಯ ತೀವ್ರತೆಯನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರು ದಯಮಾಡಿ ಅದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್. ನಿಂಗಪ್ಪ : ಆರು ವರ್ಷಗಳಾಗಿವೆ ಇನ್ನು ಕಾರ್ಯರೂಪಕ್ಕೆ ಬಂದಿಲ್ಲ. ನಮ್ಮ ದುಗುಡ ನಾವು ಹೇಳಿಕೊಳ್ಳುತ್ತಿದ್ದೇವೆ, ದಯಮಾಡಿ ಅವಕಾಶ ಮಾಡಿ ಕೊಡಿ. ನಮ್ಮ ಕಷ್ಟ ನಾವು ಹೇಳಿಕೊಳ್ಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಆಯಿತು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ರೀತಿಯ ಕುಡಿಯುವ

[ಪೀಠವನ್ನು ಉಪಸಭಾಧ್ಯಕ್ಷರು ಅಲಂಕರಿಸಿದರು]

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ 15 ದಿವಸಗಳಿಂದ ಕರೆಂಟ್ ಇರಲಿಲ್ಲ, ಅದಕ್ಕೆ ಕಾರಣ ಮೆಸ್ಕಾಂ ಎನ್ನುವುದಕ್ಕಿಂತ, ಇತ್ತೀಚೆಗೆ ಬೀಳುತ್ತಿರುವ ಭಾರಿ ಮಳೆಯಿಂದ ಹಾಗೂ ಬೀಸತ್ತಿರುವ ಭಾರಿ ಗಾಳಿಯಿಂದ MPM ಅರು ಬೇಜವಾಬ್ದಾರಿಯಿಂದ ವಿದ್ಯುತ್ ಲೈನ್‌ಗಳ ಹತ್ತಿರವೆ ಅವೈಜ್ಞಾನಿಕವಾಗಿ ನೆಟ್ಟ ನೆಡುತೋಪುಗಳಿಂದ ಮರಗಳು ತಂತಿ–ಕಂಬಗಳ ಮೇಲೆ ಬಿದ್ದು ಹೊಸನಗರ ತಾಲ್ಲೂಕಿನ ಬೇರೆ ಬೇರೆ ಕಡೆಗಳಲ್ಲಿ 400ಕ್ಕು ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದು, ಈಗ ಕಳೆದ 15 ದಿವಸಗಳಿಂದ ತಾಲ್ಲೂಕು ಪೂರ್ತಿ ಕತ್ತಲೆಯಲ್ಲಿ ಮುಳುಗಿದ್ದು ಬೆಳಕಿಲ್ಲದೆ ಸಾರ್ವಜನಿಕರ ಜೀವನ ಅಸ್ತವ್ಯಸ್ತವಾಗಿದೆ. ಇಲಾಖೆಯ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಈ MPM ಅವರು ಲೈನ್ ಹತ್ತಿರವೇ ಅಕೇಷಿಯ ಮರಗಳನ್ನು ಬೆಳೆಸಿರುವುದರಿಂದ ಅದು 75 ಅಡಿಗಳ ಎತ್ತರಕ್ಕೆ ಬೆಳೆಯುತ್ತದೆ. ಆ ಮರಗಳು ಬಿದ್ದು, 219 ಎಂದು ತಾವೆ ಹೇಳಿದ್ದಿರಿ, ಸುಮಾರು 400ಕ್ಕು ಹೆಚ್ಚು ಕಂಬಗಳು ಬಿದ್ದಿದ್ದಾವೆಂದು ನಿಮ್ಮ ಇಲಾಖೆಯವರು ಹೇಳುತ್ತಿದ್ದಾರೆ. ಆದುದರಿಂದ ಅಕೇಷಿಯ ಮರಗಳನ್ನು ಬೆಳೆಸುವುದನ್ನು ಕಡಿಮೆ ಮಾಡಬೇಕು, ಸ್ವಾಭಾವಿಕ ಅರಣ್ಯ ಮರಗಳಾದ, ಅಲಸು ಗೇರು ಇಂತವುಗಳನ್ನು ಬೆಳೆಸಿದರೆ, ಅವು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ, ಲೈನ್‌ಗಳ ಮೇಲೆ ಬೀಳುವುದಿಲ್ಲ, ನಮಗೆ ವಿದ್ಯುತ್ ಕಡಿತವಾಗುವುದಿಲ್ಲ. ಸಾಗರದಿಂದ ಹೊಸನಗರಕ್ಕೆ ಬರುವ 33 ಕೆ.ವಿ. ಲೈನ್ ಇದೆ ಅದರ ಮೇಲೆ ಮರಗಳು ಬಿದ್ದುಬಿಡುತ್ತವೆ, ಇದು ಪ್ರತಿ ವರ್ಷವಾಗತಕ್ಕಂಥ ಕೆಲಸ. ಕಳೆದ ವರ್ಷ, 15 ದಿವಸ ಹಳ್ಳಿ ಕತೆ ಬೇರೆ, ಇಡೀ ಹೊಸನಗರ ಟೌನಿಗೇ ಕರೆಂಟ್ ಇರಲಿಲ್ಲ. ಟವರ್ ಸಿಸ್ಟಂ ಲೈನ್, ಅಂದರೆ ಟವರ್ ಹಾಕುವುದರ ಮೂಲಕ ಸ್ವಲ್ಪ ಅವಾಯ್ಡ್ ಮಾಡಬಹುದು ಮತ್ತು ಈ ವಿದ್ಯುತ್ ಲೈನ್‌ಗಳ ಪಕ್ಕ ಅಕೇಷಿಯ ಮರಗಳೇನಿದ್ದಾವೆ, ಅವನ್ನು ಕೂಡಲೆ ಕಟಾವ್ ಮಾಡಿಸಿ ಅದನ್ನು MPM ಗೆ ಸಾಗಿಸುತ್ತಿರೊ, ಇನ್ನೇನು ಮಾಡುತ್ತಿರೊ ಗೊತ್ತಿಲ್ಲ, ಅದನ್ನು ಮಾಡದಿದ್ದರೆ ನಮಗೆ ಕರೆಂಟ್ ಇರುವುದಿಲ್ಲ. 22 ದಿವಸಗಳಿಂದ ಕರೆಂಟ್ ಇಲ್ಲದಿರುವ ಈ 18 ಹಳ್ಳಿಗಳು ನಕ್ಸಲ್ ಅಫೆಕ್ಟೆಡ್ ಏರಿಯಾ, ಆ ಭಾಗದಲ್ಲಿ ನಕ್ಸಲರು ಓಡಾಡುತ್ತಿದ್ದಾರೆ, ಆ ಊರುಗಳಿಗೆ ನಕ್ಸಲರು ಹೋಗಿ, ನೋಡಿ ನಿಮ್ಮ ಊರಿಗೆ ಕರೆಂಟ್ ಇದೆಯಾ, ಬೆಂಗಳೂರಿನಲ್ಲಿ ಕರೆಂಟ್ ಇಲ್ಲವೆ, ಹೊಸನಗರದಲ್ಲಿ ಕರೆಂಟ್ ಇಲ್ಲವೆ, ನಮ್ಮ ಮಂತ್ರಿಗಳು, ಶಾಸಕರ ಮನೆಗಳಿಗೆ ಕರೆಂಟ್ ಇಲ್ಲವೆ ಎಂದು,

ನಕ್ಸಲರ ಹೆದರಿಕೆಯಿಂದ ರಕ್ಷಣೆ ಕೊಡುತ್ತಿರುವ ಜನರನ್ನು ಈ ರೀತಿಯಾಗಿ ಪ್ರಚೋದನೆಯನ್ನು ಮಾಡಿ ಮನವೊಲಿಸು ಪ್ರಯತ್ನವನ್ನು ಈ ವಿದ್ಯುತ್ ವಿಷಯದ ಮೂಲಕವು ಮಾಡಿಸುತ್ತಾರೆ, ಬೇರೆ ಬೇರೆ ಮೂಲಕ ಮಾಡುವುದನ್ನು ಬೇರೆ ಸಭೆಯಲ್ಲಿ ನಾವು ಚರ್ಚೆ ಮಾಡೋಣವೆಂದು ಇವತ್ತು ಬೆಳಿಗ್ಗೆ ಹೇಳಿದ್ದಿರಿ. ಆದುದರಿಂದ ಈ ಆಕೇಷಿಯ ಮರಗಳನ್ನು ಆದಷ್ಟು ಕಡಿಸಿ ನಮಗೆ ವಿದ್ಯುತ್‌ಗೆ ಯಾವುದೆ ಆಡಚಣೆಯಾಗದಂತೆ ಮಾಡಬೇಕೆಂದು ಹೇಳುತ್ತೇನೆ. ಈ 18 ಗ್ರಾಮಗಳಲ್ಲಿ 22 ದಿವಸಗಳಿಂದ ಕರೆಂಟ್ ಇಲ್ಲದಿರುವುದರಿಂದ ಉಂಟಾಗಿರುವ ತೊಂದರೆಯನ್ನು ತಾವು ಊಹೆ ಮಾಡಬಹುದು. ಆ ಇಲಾಖೆಯ ಮಂತ್ರಿಗಳು ಸದನದಲ್ಲಿದಿದ್ದರೆ, ನಾನು ನನ್ನ ಕ್ಷೇತ್ರದ ಜನತೆಯ ಪರವಾಗಿ ಆಶ್ವಾಸನೆಯನ್ನು ಪಡೆಯಬಹುದಾಗಿತ್ತು. ತಾವಾದರು ಸರ್ಕಾರದ ಪ್ರತಿನಿಧಿಯಾಗಿ ಉತ್ತರವನ್ನು ಹೇಳುತ್ತಿದ್ದಿರಿ, ತಾವು ಸರಿಯಾದ ಉತ್ತರವನ್ನು ಕೊಡುತ್ತಿರೆಂದು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ಅಕೇಷಿಯ ಮರಗಳು ಅಷ್ಟು ಎತ್ತರಕ್ಕೆ ಬೆಳೆದಿರುವುದರಿಂದ ಅವನ್ನು ಬಹುತೇಕವಾಗಿ ವಿದ್ಯುತ್ ತಂತಿಗಳು ಹಾಗುಹೋಗುವ ಪರಿಮಿತಿಯ ಹೊರಗಡೆಗೆ ಇಡುವುದರ ಬಗ್ಗೆಯು ಕೂಡ ಅರಣ್ಯ ಇಲಾಖೆಯ ಜೊತೆಗೆ ಮಂತ್ರಿಗಳು ಮಾತನಾಡಬೇಕು. ಆ ಬಗ್ಗೆ ತತಕ್ಷಣದಲ್ಲೆ ಕ್ರಮ ಕೈಗೊಳ್ಳುವುದಕ್ಕೆ ಮಾನ್ಯ ಸಚಿವರಾದ ರೇವಣ್ಣನವರು ಈ ದಿವಸ ಸಂಜೆ ಬರಬಹುದು. ನಾಳೆ ನಿಮ್ಮನ್ನು ಛೇಂಬರ್‌ಗೆ ಕರೆದು ಈ ವಿಚಾರದ ಬಗ್ಗೆ ಮಾತನಾಡುತ್ತಾರೆ. ಖಂಡಿತವಾಗಿಯು ಆ ವಿದ್ಯುತ್‌ಅನ್ನು ಒದಗಿಸುವುದಕ್ಕೆ ತ್ವರಿತಗತಿಯಲ್ಲಿ ಕೆಲಸ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್. ಹಾಲಪ್ಪ :– ಟವರ್ ಲೈನ್‌ಅನ್ನು ಗೋಪುರ ಮಾದರಿಯಲ್ಲಿ ಹಾಕುತ್ತಾರೆ, ಆ ಬಗ್ಗೆಯು ಆಶ್ವಾಸನೆಯನ್ನು ಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ತಾವು ಮಾನ್ಯ ಸಚಿವರೊಡನೆ ಮಾತನಾಡಿದಾಗ, ಆ ನಿರ್ಣಯವನ್ನು ಕೈಗೊಳ್ಳಬಹುದು.

ವಿಷಯ : ಕುಣಿಗಲ್ ಮತ್ತು ತಿಪಟೂರು ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಏತನೀರಾವರಿ ಯೋಜನೆಗಳನ್ನು ಕಾರ್ಯಾರಂಭಗೊಳಿಸುವ ಬಗ್ಗೆ.

ವಿಷಯ : ಕೋಲಾರ ಜಿಲ್ಲೆಯಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ನೀಡುವ ಕುರಿತು.

ಶ್ರೀ ಎಸ್. ರಾಜೇಂದ್ರನ್ (ಕೋಲಾರ ಚಿನ್ನದಗಣಿ) : ಮಾನ್ಯ ಉಪಾಧ್ಯಕ್ಷರೆ, ಕೆ.ಜಿ.ಎಫ್ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ಸ್ಥಾಪಿಸುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಾಕ್ಷರೆ, ಬಹಳ ಸಂತೋಷ ನಿಜವಾಗಿಯೂ ನಮ್ಮ ಊರಿನ ಜನಸಂಖ್ಯೆ ಎಷ್ಟು ಇದೆ ಎಂದು ತಾವು ಒಪ್ಪಿಕೊಂಡಿದ್ದೀರಿ. 2005ರಲ್ಲಿ accident ನಲ್ಲಿ 23 people died, around 165 people were injured. In 2006 34 people died and around 174 is injured. 2007 ರಲ್ಲಿ ಈಗ ಆರು ತಿಂಗಳೊಳಗೆ ಸುಮಾರು 22 ಜನ ಸತ್ತು ಹೋಗಿದ್ದಾರೆ. 109 accident ಆಗಿವೆ. This is only as per official record. Unofficial ನಲ್ಲಿ ಇನ್ನು ಎಷ್ಟು ಜನ ಇರಬಹುದು ತಾವು ಊಹೆ ಮಾಡಿ. 1860 John Taylor ಕಾಲದಲ್ಲಿ ಆಗಿರುವಂತಹ ರೋಡ್‌ಗಳು. ವೈಡನ್ ಮಾಡಿಲ್ಲ. ಎಲ್ಲ ನ್ಯಾರೋ ರೋಡ್, ಯಾವ ಸೌಲಭ್ಯಗಳು ಅಲ್ಲಿ ಇಲ್ಲ. accident ಗಳು ಆಗುತ್ತಿರುತ್ತವೆ. ಈಗ ನಾವು ಏನು ಮಾಡಿದ್ದೇವೆ International level ನಲ್ಲಿ develop ಆಗುತ್ತಿದ್ದೇವೆ. ಆ International level ನಲ್ಲಿ Innova car, Toyota car, Yamaha Bike, ಇಷ್ಟೆಲ್ಲಾ ಇದೆ. ತಾವೂ ಒಪ್ಪಿಕೊಂಡಿದ್ದೀರಿ. ತಾವು ಸಂಚಾರಿ ಪೊಲೀಸ್ ಠಾಣೆಯನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಸುಮಾರು 1994ರ ಶ್ರೀಮಾನ್ ಜೆ.ಹೆಚ್. ಪಟೇಲರ ಕಾಲದಿಂದಲೂ ನಾನು ಕೇಳುತ್ತಿದ್ದೇನೆ.. ಇಲ್ಲಿಯವರೆಗೂ ಕೊಡುತ್ತೇವೆ, ಕೊಡುತ್ತೇವೆ, ಎಂದು ಹೇಳಿಕೊಂಡು ಬರುತ್ತಿದ್ದಾರೆ. ನಾನು ಮಾನ್ಯ ಖರ್ಗೆ ಸಾಹೇಬರು ಇದ್ದಾಗ ಕೂಡ ಕೇಳಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕೊಡುತ್ತೇನೆಂದು ಹೇಳಿದ್ದೆ, ಕೊಡುವುದಕ್ಕಾಗಲಿಲ್ಲ. ದಯವಿಟ್ಟು ತಾವು ಕೊಡಿ. ನಾನು ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಮಾಡಿಕೊಡುತ್ತೇನೆಂದು ಹೇಳಿದ್ದೆ, ಮಾಡಿಕೊಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇವರೇನು ಕೊಡುತ್ತೇನೆಂದು ಹೇಳುತ್ತಾರೆ. ಮಾನ್ಯ ಯಡಿಯೂರಪ್ಪನವರು ಒಂದೇ ಒಂದು ಪೊಲೀಸ್ ಸ್ಟೇಷನ್‌ಗೂ ದುಡ್ಡು ಇಟ್ಟಿಲ್ಲ. ನಾವು ಓದಿದ್ದೇವೆ. ಈಗ ಏನು ಹೇಳುತ್ತಾರೋ ನಾವು ಕೇಳಬೇಕು. ಅವರೂ ಕೊಡುತ್ತೇನೆಂದು

ಹೇಳುತ್ತಾರೆ. ಬಜೆಟ್‌ನಲ್ಲಿ ಒಂದು ಸ್ಟೇಷನ್‌ಗೂ ಪ್ರಾವಿಷನ್ ಮಾಡಿಲ್ಲ ಏನು ಹೇಳುತ್ತೀರಿ ಈಗ ಹೇಳಿ.

ಶ್ರೀ ಎಸ್. ರಾಜೇಂದ್ರನ್ : ಹಿಂದಿನ ಅಧಿವೇಶನದಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ಒಪ್ಪಿಕೊಂಡರು. Yes. I will provide that ಎಂದು ಹೇಳಿದರು. ನಾನು ಕೇಳಿದ್ದು ತಾವು ಒಪ್ಪಿಕೊಂಡಿದ್ದೀರಿ ರೆಕಾರ್ಡ್‌ನಲ್ಲಿದೆ. Sir, I can only plead. ತಾವು 2007–08 ರಂದು ಹೇಳಿದ್ದೀರಿ. ಸಂತೋಷ. ಅಕ್ಟೋಬರ್‌ನಲ್ಲಿ ಸರ್ಕಾರ ಬದಲಾವಣೆ ಆಗುತ್ತದೆ. ಆಗ ನಾನು ಹೋಗಿ ಯಾರಿಗೆ ಕೇಳಲಿ? ಹೊಸ ಮಂತ್ರಿ ಬಂದವರು ಏನು ಹೇಳುತ್ತಾರೆ, ನಾನು ಈಗ ತಾನೆ ಹೊಸದಾಗಿ ಬಂದಿದ್ದೇನೆ ಸ್ವಲ್ಪ ಸಮಯ ಕೊಡಿ ಎಂದು ಹೇಳುತ್ತಾರೆ. ಇದೆಲ್ಲಾ ನಮಗೆ ಕಷ್ಟವಾಗುತ್ತದೆ. ತಾವು ತಕ್ಷಣ ಒಂದೇ ಸಕೆಂಡ್‌ನಲ್ಲಿ ಎದ್ದು within 10 days, we will provide Traffic Police Station ಎಂದು ಒಂದು ಮಾತು ಹೇಳಿದರೆ, ನಿಜವಾಗಿಯೂ ನನಗೆ ನನ್ನ ಊರಿನ ಜನ ಮತ್ತು ನನ್ನ ತಾಲ್ಲೂಕಿನ ಜನರಿಗೆ ಬಹಳ ಸಂತೋಷವಾಗುತ್ತದೆ. You are a senior most personality. A genius personality definitely ನಮ್ಮ ಹತ್ತಿರ ಕಟ್ಟಡ ಇದೆ, fecilities ಇದೆ, ಜಾಗ ಹುಡುಕುವ ಅವಶ್ಯಕತೆ ಇಲ್ಲ. Human being life ಮೇಲೆ ನೀವು ಚಿಂತನೆ ಇಟ್ಟುಕೊಂಡು ಹೆಲ್ಮಟ್ introduce ಮಾಡಿದ್ದೀರಿ ನೀವು. ಯಾರಾದರೂ youngsters, elders, Bike ನಲ್ಲಿ ಹೋದರೆ, ಅವರಿಗೇನು ಅಪಾಯವಾಗಬಾರದು, ಅವರ life safe ಇರಬೇಕೆಂದು helmet ಕೊಟ್ಟು provide ಮಾಡಿರುವವರು ಇಂತಹ ಜನಸಂಖ್ಯೆಗೆ ತಾವು ಒಂದು ಟ್ರಾಫಿಕ್ ಪೊಲೀಸ್ ಸ್ಟೇಷನ್ ಕೊಡಲಿಲ್ಲವೆಂದರೆ, ನಮ್ಮ ಊರಿನಲ್ಲಿ ಹೋಗಿ ಮತ್ತೆ ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಇಷ್ಟೆಲ್ಲಾ ಕೇಳಿದರೂ ಸಿಗಲಿಲ್ಲ ಎಂದಾಗುತ್ತದೆ. ದಯವಿಟ್ಟು ತಾವು ತಕ್ಷಣ 10 ದಿವಸಗಳೊಳಗೆ ಒಂದು ದಿನಾಂಕ ನಿಗಧಿ ಮಾಡಿದರೆ ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಬಹಳ ವಿಷಯಗಳನ್ನು ತಾವು ಬಹಳ pleasing ಆಗಿ ವ್ಯಕ್ತ ಮಾಡಿದ್ದೀರಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಹಿಂದೆ ಕೊಡುವುದಕ್ಕಾಗಲಿಲ್ಲ ಈಗ ಕೊಡಿ ಎಂದು ಹೇಳುತ್ತಿದ್ದಾರೆ. ಇನ್ನು ಇರಡು ಮೂರು ತಿಂಗಳುಗಳಲ್ಲಿ ಅಧಿಕಾರದಲ್ಲಿ ಬದಲಾವಣೆಗಳಾಗುತ್ತವೆ ಎನ್ನತಕ್ಕಂತಹ ಆತಂಕ ಕೂಡ ತಮಗೆ ಇದೆ. ಖಂಡಿತವಾಗಿ ಒಂದು ತಿಂಗಳೊಳಗಾಗಿ ನಾನು ಇದರ ಬಗ್ಗೆ ಒಂದು ಸಭೆ ಮಾಡುತ್ತೇನೆ. ಯಾವುದನ್ನು ಬೇಗನೆ ಮಾಡಬೇಕೆಂದು ನನಗೂ ನಿಮ್ಮಷ್ಟೇ ಆಸಕ್ತಿ ಇದೆ. ಪೊಲೀಸ್ ಸ್ಟೇಷನ್‌ಬೇಕೆಂದು ತಾವು ಹೇಳಿದ್ದೀರಿ. ಅದನ್ನು ಮಾನ್ಯ ಉಪ

ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಹೇಳಿದ್ದಾರೆ. ಕಳೆದ ಬಾರಿ 13 ಪೊಲೀಸ್ ಸ್ಟೇಷನ್‌ಗಳನ್ನು ಕೊಟ್ಟಿದ್ದರು. ಅದಕ್ಕೆ ಲೆಕ್ಕ ಶೀರ್ಷಿಕೆ ಅಥವಾ ಆಯವ್ಯಯದಲ್ಲಿ ಹಣ ಇರಲಿಲ್ಲ. ಆದರೂ ಅದಕ್ಕೆ ವಿಶೇಷವಾಗಿ ಹಣ ಕೊಟ್ಟರು. ಆ ರೀತಿ ಇದಕ್ಕೂ ಹಣ ಕೊಡುತ್ತೇನೆಂದು ಹೇಳಿದ್ದಾರೆ. ಖಂಡಿತವಾಗಿ ನಾನು ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಚಾಮರಾಜ ನಗರ ಕ್ಷೇತ್ರದ ಕೊತ್ತಲವಾಡಿ ಗ್ರಾಮದಲ್ಲಿ ಅಕ್ರಮವಾಗಿ ಸಿಡಿ ಮದ್ದನ್ನು ಇಟ್ಟುಕೊಂಡಿದ್ದವರು ಅದು ಸಿಡಿದು ಆರು ಜನ ಸತ್ತಿದ್ದಾರೆ. ನಮ್ಮ ಗೃಹ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಪ್ರದೇಶದ ಸುತ್ತ ಸಂಪೂರ್ಣವಾಗಿ ನಿರಂತರವಾಗಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ. ಸಿಡಿ ಅಕ್ರಮವಾಗಿ ತಯಾರು ಮಾಡಿರುವಂತಹವು. ಸತ್ತಿರತಕ್ಕಂತಹವರು ಪತ್ರಿಕಾ ವರದಿ ಪ್ರಕಾರ ಆಂದ್ರದವರು ಇಬ್ಬರು, ತಮಿಳುನಾಡಿನವರು ಇಬ್ಬರು, ಮತ್ತು ಕರ್ನಾಟಕದವರು ಇಬ್ಬರು. ಆರು ಜನ ಸತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕು. ಎಲ್ಲೆಲ್ಲಿ ಸಿಡಿ ಮದ್ದುಗಳನ್ನು ಇಟ್ಟಿದ್ದಾರೆ, ಯಾವ್ಯಾವ ಹಳ್ಳಿಗಳಲ್ಲಿ ಇಟ್ಟಿದ್ದಾರೆ, ಮತ್ತು ಸತ್ತ ಜನರಿಗೆ ಪರಿಹಾರ ಕೊಡಬೇಕು. ಒಬ್ಬರಿಗೆ ಕನಿಷ್ಟ ಐದು ಲಕ್ಷ ರೂಪಾಯಿ. ಅಲ್ಲಿ ಗಣಿಗಾರಿಕೆ ಮಾಡತಕ್ಕಂತಹವರು ಲೂಟಿ ಮಾಡುತ್ತಿದ್ದಾರೆ. ಇಡೀ ಚಾಮರಾಜನಗರದ ಸುತ್ತ ಇದು ನಡೆಯುತ್ತಿದೆ. ಮೊದಲು ಗಣಿಗಾರಿಕೆಯನ್ನು ನಿಲ್ಲಿಸಲೇಬೇಕು. ನಾನು ಮೊದಲಿನಿಂದಲೂ ಗಣಿಗಾರಿಕೆ ನಿಲ್ಲಿಸಬೇಕೆಂದು ಹೇಳುತ್ತಿದ್ದೇನೆ. ನಮ್ಮ ಮಾತು ಯಾರ ತಲೆಗೂ ಬರಲಿಲ್ಲ, ಸರ್ಕಾರಕ್ಕೂ ಬರಲಿಲ್ಲ. ಗಣಿಗಾರಿಕೆ ನಡೆಯುತ್ತಿದೆ, ಎಲ್ಲಾ ರೀತಿಯ ನಾಶವಾಗುತ್ತಿದೆ. ಈಗ ಮತ್ತೆ ಮಹಾದೇಶ್ವರನ ಬೆಟ್ಟಕ್ಕೆ ಲಗ್ಗೆ ಹಾಕಿದ್ದಾರೆ. ಮಹಾದೇಶ್ವರನ ಬೆಟ್ಟದಲ್ಲಿಯೂ ಗಣಿಗಾರಿಕೆ ಮಾಡಬೇಕೆಂದು ಸರ್ಕಾರದ ಮೇಲೆ ತೀವ್ರವಾದ ಒತ್ತಡವನ್ನು ತರುತ್ತಿದ್ದಾರೆ. ಮಹಾದೇಶ್ವರ ಬೆಟ್ಟವನ್ನೂ ನೀವು ಗಣಿಗಾರಿಕೆಗೆ ಕೊಟ್ಟುಬಿಟ್ಟರೆ, ಇನ್ನು ಎಲ್ಲಾ ನಾಶವಾಗುತ್ತದೆ. ಇವತ್ತು ಪತ್ತಲವಾಡಿ ಗ್ರಾಮದಲ್ಲಿ ಹಳ್ಳಿ ಹಳ್ಳಿಗಳಲ್ಲಿ, ಬೀದಿ ಬೀದಿಗಳಲ್ಲಿ ಎಲ್ಲಾ ಜಮೀನುಗಳಲ್ಲಿಯೂ ಈ ತರಹ ಗಣಿಗಾರಿಕೆ ನಡೆಯುತ್ತಿದೆ. ಆದ್ದರಿಂದ ಸಂಪೂರ್ಣವಾಗಿ ಈ ಗಣಿಗಾರಿಕೆ ನಿಲ್ಲಿಸತಕ್ಕಂಥದ್ದು ಒಂದು. ಇದರ ಬಗ್ಗೆ ತಕ್ಷಣ ಸಂಪೂರ್ಣ ತನಿಖೆ ಆಗಬೇಕು. ಮತ್ತು ಪರಿಹಾರ ಕೊಡಬೇಕು. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕೆಂದು ಮಾನ್ಯ ಗೃಹ ಮಂತ್ರಿಗಳಿಗೆ ಕೇಳುತ್ತಿದ್ದೇನೆ.